ಕರ್ನಾಟಕ ಸಂಸ್ಕೃತಿಯು ಅವಶೇಷಗಳ ಪರ್ವತಗಳ ವಿನಾಶ ತಡೆಯುವ ಬಗ್ಗೆ.

೩೧೧. ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ರಾಜ್ಯದ ಸಂಸ್ಕೃತಿಯು ಜೀವಾಳಗಳಾದ ಐತಿಹಾಸಿಕ ಹಂಪೆಯಂ, ಮಾತಂಗ ಹೇಮಕೂಟ ಪರ್ವತ, ಬಾದಾಮಿ ಶ್ರವಣಬೆಳಗೊಳದ ಬೆಟ್ಟ, ಚಿತ್ರದುರ್ಗದ ಆಸುಪಾಸಿನ ಬೆಟ್ಟಗಳಲ್ಲಿನ ಕಲ್ಲು ಬಂಡೆಗಳನ್ನು ಒಡೆದು ಸಾಗಿಸಿ ವಿನಾಶ ಮಾಡಂತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

(ಆ) ಮುಂಡರಗಿ ಭೀಮರಾಮನ ಪಾಳುಬಿದ್ದ ಕೋಟೆಯ ಕಲ್ಲುಗಳಂ, ಸಾವನದುರ್ಗ ಹಾಗೂ ಇತರ ಪ್ರಮುಖ ಕೋಟೆಗಳ ಕಲ್ಲುಗಳನ್ನು ಬೇರೆ ಕಡೆ ಸಾಗಿಸುತ್ತಿರುವುದು ಸರ್ಕಾರದವರ ಗಮನಕೆ ಬಂದಿದೆಯೇ ?

(ಇ) ಹಾಗಿದ್ದಲ್ಲಿ ಈ ಸಂಸ್ಕೃತಿ ವಿನಾಶದ ತಡೆಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

(ಅ) ಬಾದಾಮಿ, ಹಂಪಿ, ಮತ್ತು ಶ್ರವಣಬೆಳಗೊಳದಲ್ಲಿಯ ಕಲ್ಲು ಬಂಡೆಗಳ ನಾಶದ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆ.

(ಆ) ಇಲ್ಲ.

(ಇ) ಸರ್ಕಾರದ ಗಮನಕ್ಕೆ ಬಂದಿರತಕ್ಕ ಸ್ಥಳಗಳಲ್ಲಿ ಕಲ್ಲು ಬಂಡೆಗಳನ್ನು ಸಾಗಿಸುವುದಂ ನಿಲ್ಲಿಸಲಾಗಿದೆ.

ಮೈಸೂರು ಚಾಮರಾಜೇಂದ್ರ ದೃಶ್ಯ ಕಲಾ ಅಕಾಡಮಿ ಬಗ್ಗೆ

೧೮೫. ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಮೈಸೂರಿನ ಚಾಮರಾಜೇಂದ್ರ ದೃಶ್ಯ ಕಲಾ ಅಕಾಡೆಮಿ (ಸಿಎಪಿಎ) ಅಸ್ತಿತ್ವಕ್ಕೆ ಬಂದದ್ದು ಯಾವಾಗ ?

(ಆ) ಇದುವರೆವಿಗೆ ಇದಕ್ಕಾಗಿ ಖರ್ಚಾಗಿರುವ ಹಣವೆಷ್ಟು ?

(ಇ) ಇದಕ್ಕೆ ಎಷ್ಟು ವಿಶ್ವವಿದ್ಯಾನಿಲಯಗಳ ಅರ್ಹತೆ ದೊರಕಿದೆ,

(ಈ) ಇದರ ಶಾಖೆಗಳು ಕರ್ನಾಟಕದಲ್ಲಿ ಎಲ್ಲೆಲ್ಲಿವೇ ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು)—

(ಅ) ಡಿಸೆಂಬರ್ ೧೯೮೨ರಲ್ಲಿ.

(ಆ) ರೂ. ೨೭,೫೦,೦೦೦-೦೦

(ಇ) ಇನ್ನೂ ಯಾವ ವಿಶ್ವವಿದ್ಯಾನಿಲಯದ ಅರ್ಹತೆ ದೊರಕಿರುವುದಿಲ್ಲ.

(ಈ) ಶಾಲೆಗಳು ಇರುವುದಿಲ್ಲ.

ರಾಜ್ಯ ಸರ್ಕಾರದ ಹೆಲಿಕ್ಯಾಪ್ಟರ್‌ನ ವಿವರ

೧೮೧. ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ)—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ರಾಜ್ಯ ಸರ್ಕಾರದವರು ಹೆಲಿಕ್ಯಾಪ್ಟರನ್ನು ಯಾವಾಗ ಕೊಳ್ಳಲಾಯಿತು ? ಹಾಗೂ ಇದರ ಬೆಲೆ ಎಷ್ಟು ?